# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 924

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13-12-2023

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಸರ್ಕಾರವು ಮಹಿಳೆಯರಿಗಾಗಿ ರಾಜ್ಯಾದ್ಯಂತ ಉಚಿತ ಪ್ರಯಾಣ ಮಾಡಲು ಶಕ್ತಿ ಯೋಜನೆಯನ್ನು ಜಾರಿಗೆ ತಂದಿದ್ದು ಈ ಯೋಜನೆಯಲ್ಲಿ ಇದುವರೆಗೂ ಎಷ್ಟು ಮಹಿಳೆಯರು ರಾಜ್ಯಾದ್ಯಂತ ಪ್ರಯಾಣಿಸಿರುತ್ತಾರೆ;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಶಕ್ತಿ ಯೋಜನೆಯಡಿ ಜೂನ್-11, 2023ರಿಂದ ನವೆಂಬರ್-30, 2023ರವರೆಗೆ ಪ್ರಯಾಣಿಸಿರುವ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ:-<br><table>
<tr><th>ನಿಗಮ</th><th>ಫಲಾನುಭವಿಗಳು (ಲಕ್ಷಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>3169.08</td></tr>
<tr><td>ಬೆಂ.ಮ.ಸಾ.ಸಂ</td><td>3425.01</td></tr>
<tr><td>ವಾ.ಕ.ರ.ಸಾ.ಸಂ</td><td>2456.63</td></tr>
<tr><td>ಕ.ಕ.ರ.ಸಾ.ನಿಗಮ</td><td>1506.98</td></tr>
<tr><td>ಒಟ್ಟು</td><td>10557.71</td></tr>
</table></td></tr>
<tr><td>ಆ.</td><td>ಮಹಿಳೆಯರ ಉಚಿತ ಪ್ರಯಾಣದಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ವೆಚ್ಚವೆಷ್ಟು;</td><td>ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆಗಳಿಗೆ ಜೂನ್ 11, 2023ರಿಂದ ನವೆಂಬರ್ 30, 2023ರವರೆಗೆ ಸರ್ಕಾರದಿಂದ ಬಿಡುಗಡೆಗೊಳಿಸಲಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:<br>(ರೂ.ಲಕ್ಷಗಳಲ್ಲಿ)<br><table>
<tr><th>ನಿಗಮಗಳು</th><th>ಬಿಡುಗಡೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>62511.66</td></tr>
<tr><td>ಬೆಂ.ಮ.ಸಾ.ಸಂ</td><td>29465.09</td></tr>
<tr><td>ವಾ.ಕ.ರ.ಸಾ.ಸಂ</td><td>41746.46</td></tr>
<tr><td>ಕ.ಕ.ರ.ಸಾ.ನಿಗಮ</td><td>33221.78</td></tr>
<tr><td>ಒಟ್ಟು</td><td>166944.99</td></tr>
</table></td></tr>
<tr><td>ಇ.</td><td>ಮಹಿಳೆಯರು ಪ್ರಯಾಣಿಸಿರುವ ಟಿಕೆಟ್ ದರದ ಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ನಾಲ್ಕು</td><td>ಶಕ್ತಿ ಯೋಜನೆಯಡಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಿರುವ ಮೊತ್ತವನ್ನು ಶೂನ್ಯ ಟಿಕೆಟ್/</td></tr>
</table>

<table>
<tr><td></td><td>ಸಾರಿಗೆ ನಿಗಮಗಳಿಗೆ ಪಾವತಿಸಲು ರೂಪಿಸಿರುವ ನಿಯಮಗಳೇನು;</td><td>ಶಕ್ತಿ ಸ್ಮಾರ್ಟ್‌ಕಾರ್ಡ್ ದತ್ತಾಂಶವನ್ನು ಆಧರಿಸಿ ಸರ್ಕಾರದಿಂದ ಅನುಪಾತದನ್ವಯ ಭರಿಸಲಾಗುವುದು.</td></tr>
<tr><td>ಈ.</td><td>ಇದುವರೆಗೂ ಎಷ್ಟು ಪ್ರತಿಶತ ಮೊತ್ತವನ್ನು ಸಾರಿಗೆ ನಿಗಮಗಳಿಗೆ ಮರುಪಾವತಿಸಲಾಗಿದೆ ಹಾಗೂ ಪೂರ್ಣ ಮರುಪಾವತಿಯನ್ನು ಮಾಡದಿರಲು ಕಾರಣಗಳೇನು;</td><td>ಶಕ್ತಿ ಯೋಜನೆಯಡಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ವೆಚ್ಚವನ್ನು ಮರುಪಾವತಿ ಮಾಡಲಾಗಿರುವ ಪ್ರತಿಶತ ಮಾಹಿತಿ ಕೆಳಕಂಡಂತಿದೆ:<br>
<table>
<tr><th>ನಿಗಮಗಳು</th><th>ಪ್ರತಿಶತ (%)</th></tr>
<tr><td>ಕ.ರಾ.ರ.ಸಾ.ನಿಗಮ</td><td>66.00</td></tr>
<tr><td>ಬೆಂ.ಮ.ಸಾ.ಸಂ</td><td>66.79</td></tr>
<tr><td>ವಾ.ಕ.ರ.ಸಾ.ಸಂ</td><td>66.13</td></tr>
<tr><td>ಕ.ಕ.ರ.ಸಾ.ನಿಗಮ</td><td>66.18</td></tr>
</table></td></tr>
<tr><td>ಉ.</td><td>ಮರುಪಾವತಿಸಬೇಕಾಗಿರುವ ಉಳಿದ ಮೊತ್ತವನ್ನು ಸಾರಿಗೆ ನಿಗಮಗಳಿಗೆ ಪಾವತಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?</td><td>ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆಗಳು ಶೂನ್ಯ ಟಿಕೇಟ್ ವಿತರಿಸಿ ತಗಲುವ ವಾಸ್ತವಿಕ ವೆಚ್ಚವನ್ನಾಧರಿಸಿ ಸರ್ಕಾರದಿಂದ ಮರುಪಾವತಿಸಲು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.2800.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಸದರಿ ಅನುದಾನಕ್ಕನುಗುಣವಾಗಿ ವಾಸ್ತವಿಕ ವೆಚ್ಚದ ಆಧಾರದ ಮೇಲೆ ಅನುಪಾತದನ್ವಯ ಸಾರಿಗೆ ಸಂಸ್ಥೆಗಳಿಗೆ ಮಾಹೆಯಾನ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ.<br><br>ಜೂನ್-2023ರಿಂದ ಮಾರ್ಚ್-2024ರವರೆಗೆ ಅಂದಾಜಿಸಿರುವ ವಾಸ್ತವಿಕ ವೆಚ್ಚ ರೂ.4377.96 ಕೋಟಿಗಳಲ್ಲಿ ಪ್ರಸ್ತುತ 2023-24ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ.2800.00 ಕೋಟಿಗಳ ಅನುದಾನವನ್ನು ಹೊರತುಪಡಿಸಿ, ರೂ.1577.96 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.</td></tr>
</table>

ಸಂಖ್ಯೆ: ಟಿಡಿ 222 ಟಿಸಿಕ್ಯೂ 2023

**(ರಾಮಲಿಂಗಾ ರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು